the district level. Just to lessen the procedure, we have constituted a Committee under the Chairmanship of the Deputy Commissioner so as to give immediate relief to the minorities. The Committee headed by Deputy Commissioner will process the applications and submit the same to the Head Office.

For the second question, about three hundred and odd industries have been proposed to be taken up and those schemes have been approved.

ಕಡಿಮೆ ಮೌಲ್ಯದ ಭಾಪಕಾಗದಗಳು ದೊರಕದಿರುವುದು

೧೧೧೧. ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಕಂದಾಯ ಯೋಜನೆ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅನೇಕ ತಿಂಗಳುಗಳಿಂದ ರಾಜ್ಯದಲ್ಲಿ ಕಡಿಮೆ ಮೌಲ್ಯದ ಭಾಪಾ ಕಾಗದಗಳು ಸರಿಯಾಗಿ ಸರಬರಾಜು ಆಗದಿರಲು ಕಾರಣವೇನು ?

ಆ) ಸಾಕಷ್ಟು ಪ್ರಮಾಣದಲ್ಲಿ ಒದಗಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ ?

ಇ) ಸರಬರಾಜಿನಲ್ಲಿ ಸಹ ಅವಶ್ಯಕತೆಯ ಅಧ್ಯತೆಯನ್ನು ಅನುಸರಿಸಲಾಗುವುದೇ ?

ಈ) ಎಲ್ಲಾ ಉಪ ಖಜಾನೆಗಳಲ್ಲಿ ಫ್ರಾಂಕಿಂಗ್ ಯಂತ್ರಗಳನ್ನು ಒದಗಿಸುವುದು ಹಾಗೂ ಬರವಣಿಗೆ ಮೊದಲು ಫ್ರಾಂಕಿಂಗ್ ಮಾಡಿಸುವುದು ಉತ್ತಮವೆಂಬುದು. ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ, ಆ ಬಗ್ಗೆ ಕೈಗೊಂಡ ಕ್ರಮವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಯೋಜನೆ ಹಾಗೂ ಕಾರ್ಮಿಕ ಮಂತ್ರಿಗಳು).—

ಅ) ಕಡಿಮೆ ಮೌಲ್ಯದ ಭಾಪಾ ಕಾಗದಗಳು ಕೇಂದ್ರ ಮುದ್ರಾಂಕ ಭಂಡಾರ ನಾಸಿಕ್‌ದಿಂದ ಸಾಕಷ್ಟು ಸರಬರಾಜು ಆಗದಿರುವುದೇ ಕಾರಣವಾಗಿದೆ;

ಆ) ಕೇಂದ್ರ ಮುದ್ರಾಂಕ ಭಂಡಾರ ನಾಸಿಕ್ ಇವರನ್ನು ಪದೇ ಪದೇ ಸಂಪರ್ಕಿಸಿ ಅಧ್ಯತೆಯ ಮೇರೆಗೆ ಕಡಿಮೆ ಮೌಲ್ಯದ ಸಾಕಷ್ಟು ಭಾಪಾ ಕಾಗದಗಳನ್ನು ಸರಬರಾಜು ಮಾಡಲು ಕೋರಲಾಗಿದೆ.

ಇ) ಹೌದು.

ಈ) ಇಲ್ಲ.

ಉ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಜಿ. ಎಸ್. ಆಚಾರ್.—ಅಧ್ಯಕ್ಷರೇ, ಕೇಂದ್ರ ಮುದ್ರಾಂಕ ಭಂಡಾರದಿಂದ ಬರುವ ಭಾಪಾ ಕಾಗದಗಳ ವಿತರಣೆ ಅಸಮರ್ಪಕವಾಗಿದೆ ಎಂಬುದು ತಮ್ಮ ಗಮನಕ್ಕೆ ಬಂದಿರುತ್ತದೆ. ನಮ್ಮ ಕಂದಾಯ ಪುರದಲ್ಲಿ ಸಹ. ಮೌಲ್ಯದ ಭಾಪಾಕಾಗದಗಳಿಗೆ ಕಳೆದ ೨ ವರ್ಷಗಳಿಂದ ಬಹಳ ಬೇಡಿಕೆ ಇದೆ. ಆದರೆ ಅವು ಅಲ್ಲಿ ಲಭ್ಯವಾಗುತ್ತಿಲ್ಲ ಭಟ್ಕಳ, ಹೊನ್ನಾವರ, ಕುಮಟಾದಲ್ಲಿ ಇವು ಹೇರಳವಾಗಿ ದೊರಕುತ್ತಿದ್ದು ಅವನ್ನು ಇಲ್ಲಿಗೆ ತಂದು ೨೦-೩೦-೫೦ ರೂಪಾಯಿ ಬೆಲೆಗೆ ಕಾಳಸಂತೆಯಲ್ಲಿ ಮಾರಲಾಗುತ್ತಿದೆ. ಇವು ಜಿಲ್ಲೆಯ ಒಂದು ಭಾಗದಲ್ಲಿ ಸಮರ್ಪಕವಾಗಿ ಸಿಗುತ್ತಿದ್ದು, ಇನ್ನೊಂದು ಜಾಗದಲ್ಲಿ ಸಿಗದೇ ಇರುವುದಕ್ಕೆ ಕಾರಣ ಏನು ? ಈಗ ಫ್ರಾಂಕಿಂಗ್ ವ್ಯವಸ್ಥೆಯನ್ನು ಸರ್ಕಾರದವರು ಮಾಡಿದ್ದು ಆರ್ಡಿನರಿ ಕಾಗದದ ಮೇಲೆ ಬರೆದುಕೊಂಡು ಮಂಗಳೂರಿಗೆ ಹೋಗಿ ಡಿಸ್ಟ್ರಿಕ್ಟ್‌ಟ್ರೆಸರಿಯಲ್ಲಿ ಮಂಜೂರು ಮಾಡಿಸಿಕೊಂಡು ಬರಬೇಕಿದ್ದು, ಅಲ್ಲಿಗೆ ಹೋಗಿಬರಲು ೨೫ ರೂ. ಖರ್ಚುಆಗುತ್ತದೆ. ಆದ್ದರಿಂದ ಈ ವ್ಯವಸ್ಥೆಯನ್ನು ಉಪವಿಭಾಗ ಮಟ್ಟಕ್ಕೂ ಪ್ರತಿ ಸಬ್ ರಿಜಿಸ್ಟ್ರಾರ್ ಕಛೇರಿಗಳಲ್ಲೂ ವಿಸ್ತರಿಸಲು ಯೋಚನೆ ಇದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗ ಕೆಲವು ದಿವಸಗಳಿಂದ ಛಾಪಾಕಾಗದಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದ್ದು ಪ್ರತಿ ಜಿಲ್ಲೆಯಲ್ಲಿಯೂ ಫ್ರಾಂಕಿಂಗ್ ಮಿಷನ್ಸ್ ಜೊಡಣೆ ಮಾಡಿದ್ದು ಕೆಲವು ಕಡೆ ವಿದ್ಯುತ್ ಚಾಲಿತ ಮಿಷನ್‌ಗಳನ್ನು ಅಳವಡಿಸಿದ್ದೇವೆ, ಈ ವ್ಯವಸ್ಥೆಯಿಂದ ಅಷ್ಟು ಕೊರತೆ ಆಗಿಲ್ಲ. ಮಾನ್ಯ ಸದಸ್ಯರು ಪಕ್ಕದ ಜಿಲ್ಲೆಯಲ್ಲಿ ದೊರೆಯುತ್ತಿದ್ದು ಇಲ್ಲಿ ಏಕೆ ದೊರೆಯಂತಿಲ್ಲವೆಂದು ಹೇಳಿದ್ದಾರೆ. ಆ ಬಗ್ಗೆ ನಾನು ವಿಚಾರಣೆ ಮಾಡುತ್ತೇನೆ. ಈ ಫ್ರಾಂಕಿಂಗ್ ಮಿಷನ್ ಮುಂಖಾಂತರ ಬಹಳ ಜನರು ಅನುಕೂಲ ಪಡೆದಿದ್ದು ಜನದಟ್ಟಣೆಯೂ ಕಡಿಮೆಯಾಗಿರುತ್ತದೆ.

ಶ್ರೀ ಜಿ. ಎಸ್. ಆಚಾರ್.—ಫ್ರಾಂಕಿಂಗ್‌ನ್ನು ಮೊದಲೇ ಮಾಡಿ ಕಾಗದಗಳನ್ನು ಕಳುಹಿಸಿದ ಪಕ್ಷದಲ್ಲಿ ಅದರಿಂದ ಜನರಿಗೆ ಅನುಕೂಲವಾಗುತ್ತದೆ. ಈಗಿನ ನಿಯಮದ ಪ್ರಕಾರ ದಸ್ತಾವೇಜು ಬರೆದ ಮೇಲೆ ಅದನ್ನು ಆಲ್ಲಿಗೆ ತೆಗೆದುಕೊಂಡು ಹೋಗಿ ಮುದ್ರೆ ಒತ್ತಿಸಬೇಕಾದ್ದರಿಂದ ಜನರಿಗೆ ತೊಂದರೆಯಾಗಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇವತ್ತು ಈ ಮಿಷನ್‌ಗಳನ್ನು ಪ್ರತಿ ಸಬ್ ರಿಜಿಸ್ಟ್ರಾರ್ ಕಛೇರಿಗಳಲ್ಲದ ತೊಡಗಿಸಲು ಸಾಧ್ಯವಿಲ್ಲ. ಜಿಲ್ಲಾಮಟ್ಟದಲ್ಲಿ ತೆರೆದಿದ್ದೇವೆ. ಇದರಿಂದ ಜನರಿಗೆ ಅನುಕೂಲವಾಗುತ್ತಿದೆ. ಅವಶ್ಯ ಕಂಡುಬಂದರೆ ಇನ್ನೂ ಹೆಚ್ಚಿನ ಅನುಕೂಲ ಮಾಡಿಕೊಡುತ್ತೇವೆ.

ಬೀಳಗಿ ಕ್ಷೇತ್ರದ ಗ್ರಾಮಗಳಲ್ಲಿರುವ ಸರಕಾರಿ ವಿದ್ಯಾರ್ಥಿನಿಲಯಂಗಳು

೧೧೨೯. ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬೀಳಗಿ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಮಿಟ್ಟು ಉತ್ತರಿಸುವರೇ ?

ಅ) ಬೀಳಗಿ ಕ್ಷೇತ್ರದ ಚಿಕ್ಕಲಗುಂಡಿ, ತೆಗ್ಗಿ ಗೊರೆ ಗ್ರಾಮಗಳಲ್ಲಿ ಸರ್ಕಾರಿ ಮಾಧ್ಯಮಿಕ ಶಾಲೆಗಳಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಮೇಲ್ಕಂಡ ಮೂರು ಗ್ರಾಮಂಗಳಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಅನುಕೂಲತೆಗಾಗಿ ವಿದ್ಯಾರ್ಥಿನಿಲಯವನ್ನು ಆರಂಭಿಸುವಂತೆ ಅಲ್ಲಿಯ ಜನರಿಂದ ಮನವಿಗಳೇನಾದರೂ ಬಂದಿವೆಯೇ ?

ಇ) ಹಾಗಿದ ಲ್ಲಿ, ಈ ಸಾಲಿನ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿನಿಲಯವನ್ನು ಆರಂಭಿಸಲಾಗುವುದೆ

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು)..

ಅ) ಹೌದು

ಆ) ಹೌದು

ಇ) ಪರಿಶೀಲಿಸಲಾಗುವುದು

ಶ್ರೀ ಬಾಬುರೆಡ್ಡಿ ವಿ. ತುಂಗಳ್.— ಮಾನ್ಯ ಅಧ್ಯಕ್ಷರೇ ಪ್ರಶ್ನೆ ಕೇಳಿದರೇ ಬರೀ ಹೌದು, ಇಲ್ಲ, ಪರಿಶೀಲಿಸಲಾಗುವುದು ಎಂದು ಪ್ರಶ್ನೆ ಕೊಡುವುದು ಅಲ್ಲ, ವಿವರವಾದ ಉತ್ತರವನ್ನು ನಾವು ನಿರೀಕ್ಷಿಸುತ್ತೇವೆ. ಈಗ ನಾನು ಸಚಿವರನ್ನು ಕೇಳುವುದು ಇಷ್ಟೇ. ನನ್ನ ಕ್ಷೇತ್ರ ಸಾಮಾನ್ಯವಾಗಿ ಸಂಪೂರ್ಣವಾಗಿ ಗ್ರಾಮಾಂತರ ಪ್ರದೇಶ ಹೊಂದಿದ ಕ್ಷೇತ್ರ ಯಾವುದೋ ಒಂದು ಕಾಲದಲ್ಲಿ ನನ್ನ ತಾಲ್ಲೂಕಿಗೆ ಒಂದು ಮಹಿಳಾ ಹಾಸ್ಟೆಲನ್ನು ಕೊಟ್ಟಿದ್ದು ಬಿಟ್ಟರೆ ಬೇರೆ ಇನ್ನೇನೂ ಸೌಕರ್ಯವನ್ನು ಕೊಟ್ಟಿರುವುದಿಲ್ಲ ಚಿಕ್ಕಲಗುಂಡಿ, ತೆಗ್ಗಿ, ಗೋರೆ ಗ್ರಾಮಗಳಿಗೆ ಸರ್ಕಾರಿ ಮಾಧ್ಯಮಿಕ ಶಾಲೆಗಳನ್ನು ಕೊಡಲಾಗಿದೆ. ಇದರ ಜೊತೆಗೆ ಅಲ್ಲಿನ ವಿದ್ಯಾರ್ಥಿಗಳಿಗೆ ಬೇಕಾಗುವ ಏನಾದರೂ ಸೌಕರ್ಯಗಳನ್ನು ಅಲ್ಲಿ ಕಲ್ಪಿಸಬೇಕಾಗುತ್ತದೆ. ಗೋರೆ, ತೆಗ್ಗಿ ಗ್ರಾಮಗಳು ಬರಗಾಲಕ್ಕೆ ತುತ್ತಾಗುವಂತಹ ಪ್ರದೇಶ. ಅಲ್ಲಿನ ಬಡಪಾಯಿಗಳಿಂದ ಖಾಸಗೀ ಹಾಸ್ಟೆಲುಗಳನ್ನು ತೆಗೆಯುವುದಕ್ಕೆ ಸಾಧ್ಯವಿಲ್ಲ, ನನ್ನ ಕ್ಷೇತ್ರ ಈ ತುದಿಯಿಂದ ಆ ತುದಿಯವರೆಗೆ ೧೩೫ ಕಿ. ಮೀ. ಉದ್ದ ಇದೆ. ನೀವು ಅಲ್ಲಿಗೆ ಹಾಸ್ಟಲು ಸೌಲಭ್ಯವನ್ನು ಕೊಡುವುದಾದರೆ ಅಲ್ಲಿ ಕಟ್ಟಡವನ್ನು ಕೊಡಿಸುವ ಜವಾಬ್ದಾರಿ ನನ್ನದು. ಆದ್ದರಿಂದ ಅಲ್ಲಿಗೆ ಆದಷ್ಟು ಜಾಗ್ರತೆ ಹಾಸ್ಟಲುಗಳನ್ನು ಒದಗಿಸುವ ವ್ಯವಸ್ಥೆಯನ್ನು ಮಾಡುತ್ತೀರಾ ?